**ದಿನಾಂಕಃ 04/07/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಎ.ಎಸ್. ವಕೀಲರಿಂದಃ**

ನಾನು ಏಳನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಎಲ್ಲಾ ಕಡೆ ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತೇನೆ. ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿ-2 ರವರು ನನ್ನ ಮೇಲೆ ಒಂದು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ನೆನಪಿಲ್ಲ. ಸದರಿ ದಾವೆಯ ಸಂಖ್ಯೆ 264-2016 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು 2 ನೇ ಪ್ರತಿವಾದಿ ಪ್ರಕರಣವನ್ನು ಸಲ್ಲಿಸುತ್ತಿರುತ್ತಾರೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಬರೆಸಲು ವಕೀಲರಿಗೆ ಸಂಪೂರ್ಣ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ದಾವಾ ಪತ್ರದ ಖಂಡಿಕೆಯ ಮೂರರಲ್ಲಿ ಇರುವ ದಾವಾ ಎ ಷೆಡ್ಯೂಲ್ ಸ್ವತ್ತು ಮೂಲತಃ ಲೇಟ್ ಹುಚ್ಚಯ್ಯರವರಿಗೆ ವಾದಿ ಮತ್ತು ಪ್ರತಿವಾದಿಯರು ಕುಟುಂಬವು ಒಟ್ಟು ಕುಟುಂಬದಲ್ಲಿ ಇರುವ ಸಮಯದಲ್ಲಿ ಸರ್ಕಾರದಿಂದ ಮಂಜೂರು ಆಗಿರುತ್ತದೆ. ಸದರಿ ಹುಚ್ಚಯ್ಯನವರು ಮರಣ ಹೊಂದಿದ ನಂತರ ಅವರ ಹೆಂಡತಿ ದಾ್ಯವಮ್ಮನವರಿಗೆ ಪೌತಿ ಖಾತೆ ಮೂಲಕ ಬಂದಿರುತ್ತದೆ. ಸದರಿ ಆಸ್ತಿಗಳನ್ನು ವಾದಿ ಮತ್ತು ಪ್ರತಿವಾದಿಗಳು ಎಲ್ಲಾರು ಒಟ್ಟು ಕುಟುಂಬದಲ್ಲಿ ಇರುವಾಗಾ ಪ್ರತ್ಯೇಕವಾಗಿ ಬಾಯಿ ಮಾತಿನಲ್ಲಿ ಹಿಸ್ಸೆ ಮಾಡಿಕೊಂಡು ಬರೆಸಿರುವ ಅಂಶಹಿ ಸರಿ ಇರುತ್ತದೆ. ಅಂದಾಜು 50 ವರ್ಷ ಮೇಲ್ಪಟ್ಟು ಬಾಯಿ ಮಾತಿನ ಹಿಸ್ಸೆ ಮಾಡಿಕೊಂಡಿರುತ್ತಾರೆ. ಆ ಬಾಯಿ ಮಾತಿನ ಮೂಲಕ ಹಿಸ್ಸೆ ಮಾಡಿಕೊಂಡ ಆಸ್ತಿಗಳು ಯಾರ್ಯಾರಿಗೆ ಯಾವ್ಯಾವ ಸರ್ವೆ ನಂಬರ್ ಗಳು ಹೋಗಿರುತ್ತದೆ ಎಂದು ನನಗೆ ಗೊತ್ತಿದ್ದೆ. ನನ್ನ ಕುಟುಂಬಕ್ಕೆ ಹಿಸ್ಸೆ ಮೂಲಕ ಬಂದಿತಹ ಸರ್ವೆ ನಂಬರ್ ಗಳು ನನಗೆ ಗೊತ್ತಿದ್ದೆ. ನಮ್ಮ ಕುಟುಂಬಕ್ಕೆ ಸರ್ವೆ ನಂಬರ್ 23, ಸರ್ವೆ ನಂಬರ್ 4/5 ಜಮೀನು ಬಂದಿದೆ. ಹಾಗೂ ಪಿತ್ರಾರ್ಜಿತವಾಗಿ ಬಂದ ಜಮೀನುಗಳು ಇನ್ನು ಇವೆ, ಆ ಸರ್ವೆ ನಂಬರ್ ಗಳು ನೆನಪಿಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ಇನ್ನು ಕೆಲವು ಪಿತ್ರಾರ್ಜಿತ ಆಸ್ತಿಗಳು ಇದೆ ಎಂದು ನಮ್ಮ ವಕೀಲರಿಗೆ ಹೇಳಿಲ್ಲ.

ಸರ್ವೆ ನಂಬರ್ 5 ರಲ್ಲಿ ನನಗೆ ಒಂದು ಎಕರೆ ಆರುವರೆ ಗುಂಟೆ ಜಮೀನು ಬಂದಿರುತ್ತದೆ. ನನಗೆ ಸರ್ವೆ ನಂಬರ್ 5 ರಲ್ಲಿ ಒಂದು ಎಕರೆ ಆರುವರೆ ಗುಂಟೆ ಜಮೀನು ಬಂದಿರುವ ಬಗ್ಗೆ ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ಆ ರೀತಿ ಭಾಗವಾದ ನಂತರ ನಮ್ಮ ವ್ಯವಹಾರವನ್ನು ನಾವು ನೋಡಿಕೊಳ್ಳುತಿದ್ದೇವೆ. ನಾಗರಾಜುರವರು ಅವರ ಕುಟುಂಬದ ವ್ಯವಹಾರವನ್ನು ಅವರು ನೋಡುಕೊಳ್ಳುತ್ತಿದ್ದಾರೆ. ನಮ್ಮ ಕುಟುಂಬದ ಜಮೀನಿನ ವ್ಯವಹಾರಕ್ಕೂ ಅವರ ಕುಟುಂಬದ ಜಮೀನಿನ ವ್ಯವಹಾರಕ್ಕೂ ಸಂಬಂಧ ಇರುತ್ತದೆ. ಆದರೆ ವಹಿವಾಟು ಬೇರೆ ಬೇರೆ ಇರುತ್ತದೆ. ಆ ರೀತಿ ಪ್ರತ್ಯೇಕವಾದ ವಹಿವಾಟನ್ನು ಸುಮಾರು 25 ವರ್ಷಗಳಿಂದ ಮಾಡಿಕೊಂಡು ಬರುತ್ತಿದ್ದೇವೆ. ನನಗೆ ಬಂದಿರುವ ಒಂದುದ ಎಕರೆ ಆರುವರೆ ಗುಂಟೆಯ ಜಮೀನಿನ ಪೂರ್ವಕ್ಕೆ ಮೈಲಾರಿ ಜಮೀನು, ಪಶ್ಚಿಮಕ್ಕೆ ನಮ್ಮ

ಜಮೀನಿನ ಸರ್ವೆ ನಂಬರ್ 4, ದಕ್ಷಿಣಕ್ಕೆ ಜವರಮ್ಮರವರ ಜಮೀನು, ಉತ್ತರಕ್ಕೆ ಚಿಕ್ಕಯ್ಯರವರ ಜಮೀನು. ನಾನು ದಾವಾ ಎ ಷೆಡ್ಯೂಲ್ ಸ್ವತ್ತಿನ 3 ಎಕರೆ 20 ಗುಂಟೆಗೆ ಚೆಕ್ ಬಂದಿ ಬರೆಸಿರುತ್ತೇನೆ. ನಾನು ಈಗ ಹೇಳಿದ ಚೆಕ್ ಬಂದಿಯು ಸರ್ವೆ ನಂಬರ್ 5ರ ಒಟ್ಟು ವಿಸ್ತೀರ್ಣಕ್ಕೆ ಹೇಳಿರುತ್ತೇನೆ. ಒಂದು ಎಕರೆ ಆರುವರೆ ಗುಂಟೆ ಜಮೀನಿಗೂ ಸಹ ಇದೆ ಚೆಕ್ ಬಂಧಿಯಾಗಿರುತ್ತದೆ. ಸರ್ವೆ ನಂಬರ್ 23 ರ ಜಮೀನು ಸಹ ಭಾಗವಾಗಿರುತ್ತದೆ. ಸರ್ವೆ ನಂಬರ್ 23 ರಲ್ಲಿ ನನಗೆ ಒಂದು ಎಕರೆ ಜಮೀನು ಬಂದಿರುತ್ತದೆ. ಆ ಒಂದು ಎಕರೆಗೆ ಚೆಕ್ ಬಂದಿ ನನಗೆ ನೆನಪಿಲ್ಲ.

ಕಾಳಜ್ಜಯ್ಯ ನನಗೆ ಗೊತ್ತಿಲ್ಲ. ಕಾಳಜ್ಜಿ ಸಹ ಗೊತ್ತಿಲ್ಲ. ಜಯಮ್ಮರವರು ಸಹ ಗೊತ್ತಿಲ್ಲ. ಸಿಂಗ್ರಯ್ಯ ಸಹ ಗೊತ್ತಿಲ್ಲ. ಸಿಂಗ್ರಯ್ಯ ಯಾವ ಊರಿನಲ್ಲಿ ಇದ್ದಾರೆ ಗೊತ್ತಿಲ್ಲ ಕಾಳಜ್ಜಯ್ಯರವರ ಮಗಳು ಗೌರಮ್ಮ ನನಗೆ ಗೊತ್ತಿಲ್ಲ. ನನಗೆ ದೊಡ್ಡಯ್ಯರವರು ಗೊತ್ತು. ದೊಡ್ಡಯ್ಯರವರು ಮೃತಪಟ್ಟಿರುತ್ತಾರೆ. ದೊಡ್ಡಯ್ಯರವರು 1981 ರಲ್ಲಿ ಮೃತಪಟ್ಟಿರುತ್ತಾರೆ. ಸಾಕ್ಷಿಯು ದೊಡ್ಡಯ್ಯರವರ ಮರಣ ಪ್ರಮಾಣಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ1 ಎಂದು ಗುರುತಿಸಲಾಯಿತು. ಸಾಕ್ಷಿಯು ಮತ್ತೊಂದು ಮರುಣ ಪ್ರಮಾಣಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ2 ಎಂದು ಗುರುತಿಸಲಾಯಿತು.

(ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು)

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಹೊಳೆನರಸೀಪುರ